## 55. ರಾಷ್ಟ್ರ ರಾಜಧಾನಿ ಬಾಗಿಲಲ್ಲಿ ಮಿಡತೆಗಳ ಸೈನ್ಯ

ಉತ್ತರ ಪ್ರದೇಶ, ಪಂಜಾಬ್ ಹಾಗೂ ಮಧ್ಯಪ್ರದೇಶಕ್ಕೆ ಲಗ್ಗೆಯಿಟ್ಟು ಬೆಳೆದು ನಿಂತ ಫಸಲು ತಿಂದು ತೇಗಿದ್ದ ಬೃಹತ್ ಮಿಡತೆಗಳ ದಂಡು ಈಗ ದಿಲ್ಲಿಯ ಪ್ರವೇಶದ್ವಾರ ಎನ್ನಲಾಗುವ ಗುರುಗ್ರಾಮ ತಲುಪಿದೆ. ಬೆಳಿಗ್ಗೆ 11.30ಕ್ಕೆ ಏಕಾಏಕಿ ಗುರುಗ್ರಾಮದಲ್ಲಿ ಕತ್ತಲು ಕವಿದಂತೆ ಆದಾಗ ಎರಡು ಕಿ.ಮೀ. ನಷ್ಟು ಉದ್ದನೆಯ ಮಿಡತೆಗಳ ಸೈನ್ಯ ಆಕಾಶದಲ್ಲಿ ಕಾಣಿಸಿದೆ.

ಸಾವಿರಾರು ಸಂಖ್ಯೆಯ ಮಿಡತೆಗಳು ದಿಲ್ಲಿಯ ಅಂತರರಾಷ್ಟ್ರೀಯ ವಿಮಾನನಿಲ್ದಾಣ, ದಿಲ್ಲಿ ಗಡಿಯಲ್ಲಿರುವ ಹರಿಯಾಣದ ಫರೀದಾಬಾದ್ ಮತ್ತು ಪಲ್ವಾಲ್‌ನಲ್ಲಿನ ಕೃಷಿ ಭೂಮಿಗಳನ್ನು ಆವರಿಸತೊಡಗಿವೆ. ಶೀಘ್ರದಲ್ಲೇ ದಿಲ್ಲಿ ಪ್ರವೇಶಿಸುವ ಸಾಧ್ಯತೆಯಿದೆ ಎಂದು ಕೃಷಿ ಸಚಿವಾಲಯ ಮಿಡತೆಗಳ ಎಚ್ಚರಿಕೆ ವಿಭಾಗದ ಅಧಿಕಾರಿ ಕೆ. ಎಲ್. ಗುರ್ಜರ್ ಹೇಳಿದ್ದಾರೆ.

ಮನೆಗಳ ಮೇಲೆ, ಮರಗಳು, ಗಿಡಗಳ ಮೇಲೆ ಕೂತು ಅವುಗಳನ್ನು ತಿನ್ನುತ್ತಿರುವ ಮಿಡತೆಗಳ ವಿಡಿಯೋಗಳನ್ನು ಗುರುಗ್ರಾಮದ ಗ್ರಾಮಸ್ಥರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಮಾಜಿ ಕ್ರಿಕೆಟಿಗ ವೀರೇಂದ್ರ ಸೆಹ್ವಾಗ್ ಅವರು ತಮ್ಮ ಮನೆ ಸಮೀಪ ಕಾಣಿಸಿಕೊಂಡ ಮಿಡತೆ ದಂಡಿನ ವಿಡಿಯೋ ಮಾಡಿರುವುದು ವೈರಲ್ ಆಗಿದೆ.

**ದಕ್ಷಿಣ, ಪಶ್ಚಿಮ ದಿಲ್ಲಿಯಲ್ಲಿ ಹೈ ಅಲರ್ಟ್:** ಮಿಡತೆಗಳು ಕೃಷಿಭೂಮಿಯಲ್ಲಿನ ಬೆಳೆಗಳನ್ನು ತಿಂದು ಮುಗಿಸುವ ಆತಂಕದಲ್ಲಿ ಕೃಷಿಕರು ಸರ್ಕಾರಕ್ಕೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವಂತೆ ಒತ್ತಡ ಹೇರುತ್ತಿದ್ದಾರೆ. ಇದಕ್ಕೆ ಸ್ಪಂದಿಸಿರುವ ದಿಲ್ಲಿ ಪರಿಸರ ಸಚಿವ ಗೋಪಾಲ್ ರಾಯ್ ಅವರು ರಾಷ್ಟ್ರ ರಾಜಧಾನಿಯ ದಕ್ಷಿಣ ಮತ್ತು ಪಶ್ಚಿಮ ಜಿಲ್ಲೆಗಳ ಆಡಳಿತಕ್ಕೆ ಕಟ್ಟೆಚ್ಚರ ವಹಿಸುವಂತೆ ಸೂಚಿಸಿದ್ದಾರೆ. ಮಿಡತೆಗಳು ಕಂಡುಬಂದ ಕೂಡಲೇ ಅರಣ್ಯ ಇಲಾಖೆವತಿಯಿಂದ ಭಾರಿ ಗಾತ್ರದ ಡ್ರಮ್‌ಗಳು ಮತ್ತು ಡೊಳ್ಳುಗಳ ವ್ಯವಸ್ಥೆ ಮಾಡಿ ಬಾರಿಸಿ ಆ ಮೂಲಕ ಮಿಡತೆಗಳನ್ನು ಓಡಿಸಲು ಸೂಚಿಸಲಾಗಿದೆ. ಸಾಧ್ಯವಾದರೆ ಡಿಜೆ (ಮ್ಯೂಸಿಕ್ ಸಿಸ್ಟಂ ವ್ಯವಸ್ಥೆ) ಗಳಲ್ಲಿ ದೊಡ್ಡ ಧ್ವನಿಯಲ್ಲಿ ಸಂಗೀತ ಹಾಕಿಸಿ ಆದರಿಂದ ಉತ್ಪನ್ನವಾಗುವ ಶಬ್ದ ತರಂಗಗಳಿಂದ ಮಿಡತೆಗಳನ್ನು ಬೆದರಿಸಲು ಕೂಡ ಸಚಿವರು ಜಿಲ್ಲಾಡಳಿತಕ್ಕೆ ಸೂಚನೆ ನೀಡಿದ್ದಾರೆ. ಮಿಡತೆಗಳು ಕಾಣಿಸಿಕೊಂಡರೆ ಕಿಟಕಿ ಬಾಗಿಲುಗಳನ್ನು ತೆರೆಯದಂತೆ ನಿವಾಸಿಗಳಿಗೆ ಸೂಚನೆ ನೀಡಲಾಗಿದೆ.

ಹವಾಮಾನ ವೈಪರೀತ್ಯವೇ ಮಿಡತೆ ದಾಳಿಗೆ ಪ್ರಮುಖ ಕಾರಣ ಎಂದು ತಜ್ಞರು ತಿಳಿಸಿದ್ದಾರೆ. ಮಣ್ಣಿನ ತೇವಾಂಶದಲ್ಲಿ ಏರುಪೇರು, ಆಹಾರ ಸಿಗದಿರುವುದು ಅವುಗಳನ್ನು ವಲಸೆ ಹೋಗುವಂತೆ ಮಾಡಿದೆ ಎಂದು ತಿಳಿಸಿರುತ್ತಾರೆ.

ಆಧಾರ:ವಿಜಯ ಕರ್ನಾಟಕ, ದಿನಾಂಕ:28.06.2020